



ಜೊತೆಯಾಗಿದ್ದವು. ಸಾಕಷ್ಟು ಜನರು ಬೆಂಬಲ ನೀಡಿದರು' ಎಂದು ತಮ್ಮ ಸಹಾಯಕ್ಕೆ ನಿಂತ ಹಲವರನ್ನು ನೆನೆದರು ಕೋಮಲ್.

ಸೋಲೊ ರೈಡಿಂಗ್ ಅವರಿಗೆ ವಿಶಿಷ್ಟ ಅನುಭವದ ಬುತ್ತಿಯನ್ನೂ ಕಟ್ಟಿಕೊಟ್ಟಿದೆ. 'ನನ್ನ ದೇಹ ನನ್ನ ಒತ್ತಾಸೆಗಳಿಗೆ ಬೆಂಬಲವಾಗಿ ನೀಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಅರಿತೆ. ಇಡೀ ಓಡಾಟದಲ್ಲಿ ನನ್ನ ದೇಹ ಬೇರೆ ಬೇರೆ ವಾತಾವರಣ, ಪರಿಸರಕ್ಕೆ ಸುಲಭವಾಗಿ ಹೊಂದಿಕೊಂಡಿದ್ದನ್ನು ಗಮನಿಸಿದೆ. 14–15 ಗಂಟೆ ನಿರಂತರವಾಗಿ ಬೈಕ್ ಓಡಿಸಿದರೂ ದೇಹಕ್ಕೆ ಆಯಾಸ ಎನಿಸಲಿಲ್ಲ. ಇದು ನನಗೆ ಮುಂದಿನ ಗುರಿಗಳಿಗೂ ಸಹಕಾರಿ. ಮತ್ತೊಂದು, ನಮ್ಮ ದೇಶದ ಜನರ ಸಹೃದಯತೆಯ ಮನವರಿಕೆಯಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ಭಾರತ ಅದೆಷ್ಟು ವೈವಿಧ್ಯದಿಂದ ಕೂಡಿದೆ ಎಂದು ಅಚ್ಚರಿ ಉಂಟಾಯಿತು. ಸಂಸ್ಕೃತಿ, ಆಚರಣೆ, ಭಾಷೆ, ಊಟೋಪಚಾರಗಳ ವಿಭಿನ್ನತೆ–ವೈವಿಧ್ಯದಲ್ಲಿ ಏಕತೆ ಎಂಬುದನ್ನು ಸಾರಿ ಸಾರಿ ಹೇಳಿದಂತೆ ಭಾಸವಾಗುತ್ತಿತ್ತು. ಭಾರತದ ಕುರಿತು ಅರಿಯಬೇಕಾದ್ದು ಸಮುದ್ರದಷ್ಟಿದೆ. ಇನ್ನಷ್ಟು ಅನ್ವೇಷಣೆ ಮುಂದಿದೆ' ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟರು.

ಸಿಹಿ ಘಟನೆಗಳೊಂದಿಗೆ ಕೊಂಚ ಗಡಿಬಿಡಿ ಉಂಟು ಮಾಡಿದ ಪ್ರಸಂಗಗಳನ್ನೂ ಅವರು ಎದುರಿಸಿದ್ದಾರೆ. ಮುಂಬೈನಲ್ಲಿ ರಸ್ತೆ ತಪ್ಪಿ ಸುಖಾಸುಮ್ಮನೆ ತಿರುಗಾಡುವಂತಾಗಿದ್ದು, ವಡೋದರದಲ್ಲಿ ನಿತ್ರಾಣಗೊಂಡಿದ್ದು, ವಾಪಸ್ಸಾಗುವಾಗ ಆಗ್ರಾದಲ್ಲಿ ಎರಡು ಮೂರು ಬಾರಿ ಸಣ್ಣ ಸಣ್ಣ ಅಪಘಾತ ಕಂಡಿದ್ದು – ಇವನ್ನೆಲ್ಲ ಎಂದಿಗೂ ಮರೆಯಲು ಸಾಧ್ಯವಿಲ್ಲ ಎನ್ನುತ್ತಲೇ, 'ಇಂಥ ಅನುಭವಗಳು ಕೂಡ ಬದುಕಿಗೆ ಬೇಕಲ್ಲವೇ' ಎನ್ನುತ್ತಾರೆ ಕೋಮಲ್.

## ಸಕಾರಾತ್ಮಕವಾಗಿ ಯೋಚಿಸಿ

'ಮಹಿಳೆಯರು ಸೋಲೊ ರೈಡಿಂಗ್ ಹೋಗುವುದು ಸುಲಭವಲ್ಲ, ಸುರಕ್ಷತೆ ಇರುವುದಿಲ್ಲ ಎಂದು ಎಷ್ಟೋ ಮಂದಿ ಹೇಳುತ್ತಾರೆ. ಅದು ನಮ್ಮ ಕಲ್ಪನೆ. ನಮಗೆ ಬೆಂಬಲ ನೀಡುವ ಜನರು ಸಾಕಷ್ಟಿದ್ದಾರೆ. ನೆಗೆಟಿವ್ ಆಗಿ ಯೋಚಿಸುವುದು ಏಕೆ? ಹಿಂದೆ ಸರಿಯುವ ಬದಲು ಮುಂದೆ ಹೋಗಬೇಕಷ್ಟೆ' ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯ.

ತಂದೆ ಪ್ರಭುಗೌಡ ಹಾಗೂ ತಾಯಿ ರಾಜೇಶ್ವರಿ ಅವರ ಬೆಂಬಲ ಹಾಗೂ ಉತ್ಸಾಹ ಕೋಮಲ್ ಅವರ ಬದುಕಿನಲ್ಲಿ ಹುಮ್ಮಸ್ಸು ತುಂಬಿದೆ. ಈ ಯಾನದಿಂದ ಇನ್ನಷ್ಟು ಉತ್ಸಾಹ ಪಡೆದುಕೊಂಡಿರುವ ಅವರು, ಜುಲೈನಲ್ಲಿ ಶಿಮ್ಲಾ, ಮನಾಲಿ, ಲಡಾಖ್ ಹೋಗುವ ಯೋಜನೆ ಇಟ್ಟುಕೊಂಡಿದ್ದಾರೆ. ಅಂತರರಾಷ್ಟ್ರೀಯ ರೈಡ್‌ಗಳನ್ನು ಮಾಡುವ ಕನಸು ಅವರೊಂದಿಗಿದೆ.

ಪ್ರತಿಕ್ರಿಯಿಸಿ: feedback@sudha.co.in


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ

"ಗುರೂಜಿ ಮಹೇಶ್‌ಭಟ್"

ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517